# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 581
2. ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 09.03.2026
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಚಿಕಿತ್ಸಾ ವಿಭಾಗಗಳ ಸಂಖ್ಯೆ ಎಷ್ಟು; ಸದರಿ ವಿಭಾಗಗಳಲ್ಲಿ ಮಂಜೂರಾದ ತಜ್ಞ ವೈದ್ಯರ ಹುದ್ದೆಗಳೆಷ್ಟು ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ಆಧಾರಿತ ವೈದ್ಯರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿಯಲ್ಲಿ ಬರುವ ವಿವಿಧ ಆಸ್ಪತ್ರೆಗಳಲ್ಲಿ ಮಂಜೂರಾದ ವಿಭಾಗಗಳ ವಿವರಗಳು ಈ ಕೆಳಕಂಡಂತಿದೆ. (see tables below) |

| ಸಂಸ್ಥೆಯ/ಆಸ್ಪತ್ರೆಯ ವಿವರ | ವಿಭಾಗಗಳ ಸಂಖ್ಯೆ |
|---|---|
| ಎಂಎಂಸಿಆರ್‌ಐ ಕಾಲೇಜು | 08 |
| ಕೆ.ಆರ್ ಆಸ್ಪತ್ರೆ | 10 |
| ಚೆಲುವಾಂಬ ಆಸ್ಪತ್ರೆ | 03 |
| ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ | 02 |
| ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ | 12 |
| ಟ್ರಾಮಾಕೇರ್ ಸೆಂಟರ್ ಆಸ್ಪತ್ರೆ | 02 |
| ಒಟ್ಟು | 37 |

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿಯಲ್ಲಿ ಬರುವ ವಿವಿಧ ಆಸ್ಪತ್ರೆಗಳಲ್ಲಿನ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಸಂಸ್ಥೆಯ/ಆಸ್ಪತ್ರೆಯ ವಿವರ | ಮಂಜೂರಾದ ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ |
|---|---|---|---|
| ಎಂಎಂಸಿಆರ್‌ಐ ಕಾಲೇಜು | 331 | 265 | 66 |
| ಕೆ.ಆರ್ ಆಸ್ಪತ್ರೆ | 28 | 24 | 4 |
| ಚೆಲುವಾಂಬ ಆಸ್ಪತ್ರೆ | 8 | 4 | 4 |
| ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ | 8 | 3 | 5 |
| ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ | 41 | 25 | 16 |
| ಟ್ರಾಮಾಕೇರ್ ಸೆಂಟರ್ ಆಸ್ಪತ್ರೆ | 29 | 07 | 22 |
| ಒಟ್ಟು | 445 | 328 | 117 |

<table>
<tr><td></td><td></td><td>ಭರ್ತಿ ಮಾಡಿದ ಹುದ್ದೆಗಳ ವಿವರ: ಖಾಯಂ ವೈದ್ಯರು- 229, ಗುತ್ತಿಗೆ ವೈದ್ಯರು- 84, ಒಂದು ವರ್ಷದ ಕಡ್ಡಾಯ ಸೇವೆ-15 ಒಟ್ಟು ಭರ್ತಿ - 328</td></tr>
<tr><td>ಆ)</td><td>ಈ ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ಒಟ್ಟು ಹಾಸಿಗೆಗಳ ಸಂಖ್ಯೆ ಎಷ್ಟು: ಪ್ರತಿನಿತ್ಯ ಸರಾಸರಿ ಎಷ್ಟು ಸಂಖ್ಯೆಯ ಹೊರರೋಗಿಗಳು ಮತ್ತು ಒಳರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ: ರೋಗಿಗಳ ಸಂಖ್ಯೆಗೆ ಅನುಗುಣವಾಗಿ ವೈದ್ಯರು ಮತ್ತು ಹಾಸಿಗೆಗಳ ಸಂಖ್ಯೆ ಸಾಕಾಗುತ್ತಿದೆಯೇ:</td><td>
<table>
<tr><th>ಆಸ್ಪತ್ರೆ ವಿವರ</th><th>ಹಾಸಿಗೆಗಳ ಸಂಖ್ಯೆ</th><th>ಒ.ಪಿ.ಡಿ ಪ್ರತಿನಿತ್ಯ</th><th>ಐ.ಪಿ.ಡಿ ಪ್ರತಿನಿತ್ಯ</th><th>ವೈದ್ಯರು ಮತ್ತು ಹಾಸಿಗೆಗಳ ಸಂಖ್ಯೆ ಸಾಕಾಗುತ್ತಿದೆಯೇ:</th></tr>
<tr><td>ಕೆ.ಆರ್ ಆಸ್ಪತ್ರೆ</td><td>1050</td><td>1350</td><td>600</td><td>ಸಾಕಾಗುತ್ತಿದೆ</td></tr>
<tr><td>ಚೆಲುವಾಂಬ ಆಸ್ಪತ್ರೆ</td><td>421</td><td>305</td><td>330</td><td>ಸಾಕಾಗುತ್ತಿದೆ</td></tr>
<tr><td>ಪಿಕೆಟಿಬಿ & ಸಿಡಿ ಆಸ್ಪತ್ರೆ</td><td>279</td><td>130</td><td>120</td><td>ಸಾಕಾಗುತ್ತಿದೆ</td></tr>
<tr><td>ಟ್ರಾಮಾಕೇರ್ ಸೆಂಟರ್ ಆಸ್ಪತ್ರೆ</td><td>150</td><td>170</td><td>120</td><td>ಸಾಕಾಗುತ್ತಿದೆ</td></tr>
<tr><td>ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ</td><td>250</td><td>200</td><td>130</td><td>ಸಾಕಾಗುತ್ತಿದೆ</td></tr>
<tr><td>ಒಟ್ಟು</td><td>2150</td><td>2155</td><td>1300</td><td></td></tr>
</table>
</td></tr>
<tr><td>ಇ)</td><td>ಮೈಸೂರು ವೈದ್ಯಕೀಯ ಕಾಲೇಜಿನ (MMC&RI) ಆವರಣದಲ್ಲಿರುವ ಕೆ.ಆರ್. ಮತ್ತು ಚೆಲುವಾಂಬ ಆಸ್ಪತ್ರೆಗಳ ಹಳೆಯ ಕಟ್ಟಡಗಳ ಬದಲಾಗಿ ಸುಸಜ್ಜಿತ ಹೊಸ ಕಟ್ಟಡ ನಿರ್ಮಿಸುವ ಹಾಗೂ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದಲ್ಲಿ, ಈ ಯೋಜನೆಗೆ ಮೀಸಲಿಟ್ಟಿರುವ ಅನುದಾನ ಮತ್ತು ಕಾಮಗಾರಿಯ ಪ್ರಸ್ತುತ ಹಂತವೇನು?</td><td>ಸನ್ಮಾನ್ಯ ಮುಖ್ಯಮಂತ್ರಿಗಳು 2024-25 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-145 ರಲ್ಲಿ "ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್" ಸ್ಥಾಪಿಸಿದ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಶತಮಾನೋತ್ಸವದ ನೆನಪಿಗಾಗಿ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ರೂ.7500.00 ಲಕ್ಷಗಳ ವೆಚ್ಚದಲ್ಲಿ ಸುಸಜ್ಜಿತ "ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್"" ಹೊರರೋಗಿ ವಿಭಾಗದ ಕಟ್ಟಡವನ್ನು ನಿರ್ಮಿಸಲಾಗುವುದು ಎಂದು ಘೋಷಿಸಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 617 ಎಂಎಸ್ಎಫ್ 2023 ಬೆಂಗಳೂರು ದಿನಾಂಕ:12.07.2024 ರಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>
<table>
<tr><th>ಭೌತಿಕ ಪ್ರಗತಿ</th><th>ಆರ್ಥಿಕ ಪ್ರಗತಿ</th></tr>
<tr><td>ನಿಗಧಿತ ಸ್ಥಳದಲ್ಲಿನ ದುಸ್ಥಿತಿಯಲ್ಲಿದ್ದ ಕಟ್ಟಡಗಳನ್ನು ನಿಯಮಾನುಸಾರ ನೆಲಸಮ ಮಾಡಲಾಗಿದ್ದು ಅಡಿಪಾಯದ ಮಣ್ಣಿನ ಅಗೆತದ ಕೆಲಸ ಪ್ರಾರಂಭಗೊಂಡಿದೆ</td><td>1) ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 617 ಎಂಎಸ್ಎಫ್ 2023, ದಿನಾಂಕ:06.12.2025ರಲ್ಲಿ ರೂ.10.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.<br>2) ಕಾರ್ಯಪಾಲಕ ಅಭಿಯಂತರರು, ಆಕುಕ ಇಲಾಖೆ, ಮೈಸೂರು ವಿಭಾಗ ಇವರಿಗೆ ಶೇ.30 ರಂತೆ ರೂ.3.00 ಕೋಟಿಗಳ ಅನುದಾನವನ್ನು</td></tr>
</table>
</td></tr>
</table>

| | | | |
|---|---|---|---|
| | | | ದಿನಾಂಕ:17.01.2026ರಲ್ಲಿ ಬಿಡುಗಡೆ ಮಡಲಾಗಿರುತ್ತದೆ.<br>3) ಕಾರ್ಯಪಾಲಕ ಅಭಿಯಂತರರು, ಆಕುಕ ಇಲಾಖೆ, ಮೈಸೂರು ವಿಭಾಗ ಇವರು ಗುತ್ತಿಗೆದಾರರಿಗೆ ರೂ.2.98 ಕೋಟಿಗಳನ್ನು ದಿನಾಂಕ:27.02.2026 ರಂದು ಪಾವತಿ ಮಾಡಲಾಗಿದೆ. |
| | | ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಆಚರಣೆಯ ಹಿನ್ನೆಲೆಯಲ್ಲಿ ಸಂಸ್ಥೆಯ ಆಸ್ಪತ್ರೆಗಳ ಕಟ್ಟಡಗಳಲ್ಲಿ 14 ನವೀಕರಣ ಕಾಮಗಾರಿಗಳನ್ನು ರೂ.89.00 ಕೋಟಿ ಗಳ ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 187 ಎಂಎಸ್‌ಎಫ್ 2022, ದಿನಾಂಕ:07.10.2022 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ (ಲಗತ್ತಿಸಿದೆ). ಅದರನ್ವಯ, ನವೀಕರಣ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. | |

**ಸಂಖ್ಯೆ:** ಎಂಇಡಿ 128 ಎಂಎಸ್‌ಎಫ್ 2026

**(ಡಾ: ಶರಣಪ್ರಕಾಶ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಸಂಸ್ಥೆಯು 2024ರಲ್ಲಿ ಶತಮಾನೋತ್ಸವ ಆಚರಿಸುವ ಹಿನ್ನೆಲೆಯಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 187 ಎಂಎಸ್ಎಫ್ 2022, ದಿನಾಂಕ:12.04.2022.
2. ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರ ಏಕ ಕಡತ ಸಂಖ್ಯೆ: MMCRI-DEV0DW12022-MMCRI-ADMNR.

*******

**ಪ್ರಸ್ತಾವನೆ:**

ಮೇಲೆ ಓದಲಾದ(1)ರಲ್ಲಿ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು 2024ರಲ್ಲಿ ಶತಮಾನೋತ್ಸವ ಆಚರಿಸುವ ಹಿನ್ನೆಲೆಯಲ್ಲಿ ಸಂಸ್ಥೆಯಡಿಯಲ್ಲಿನ ಕೆ.ಆರ್. ಆಸ್ಪತ್ರೆಯ ನವೀಕರಣವನ್ನು ಮುಂದಿನ ಮೂರು ವರ್ಷಗಳಲ್ಲಿ ರೂ.89.00ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ತಾತ್ವಿಕ ಅನುಮೋದನೆಯನ್ನು ನೀಡಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ.

ಅದರಂತೆ, ಮೇಲೆ ಓದಲಾದ(2)ರಲ್ಲಿ ನಿರ್ದೇಶಕರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯಲ್ಲಿ ತಿಳಿಸಲಾಗಿರುವಂತೆ, ನವೀಕರಣ ಕಾಮಗಾರಿಗೆ ಯೋಜನಾ ವರದಿಯನ್ನು ಸಿದ್ಧಪಡಿಸಿ ಕ್ರಮಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರಿಗೆ ಕೋರಿರುತ್ತಾರೆ. ಅದರನ್ವಯ ಸದರಿ ಕಟ್ಟಡಗಳು (Heritage Building) ಸಾಂಪ್ರದಾಯಿಕ ಕಟ್ಟಡಗಳಾಗಿರುವುದರಿಂದ, ನಿಯಮಾನುಸಾರ ಈ ಎಲ್ಲಾ ಆಸ್ಪತ್ರೆ ಕಟ್ಟಡಗಳ ನವೀಕರಣ ಕಾಮಗಾರಿಗಳು, ಬೆಂಕಿ ಅವಘಡದಿಂದ ಪಾರಾಗುವ ಅಗ್ನಿ ನಂದಕ (Fire Fighting) ಕಾಮಗಾರಿಗಳು, ಆಸ್ಪತ್ರೆಗಳಿಗೆ ಬಾಹ್ಯ ವಿದ್ಯುದ್ದೀಕರಣ, ಸಿಸಿ ಕ್ಯಾಮರಾಗಳ ವ್ಯವಸ್ಥೆ ಮತ್ತು ಲ್ಯಾನ್ ನೆಟ್‌ವರ್ಕಿಂಗ್ ಕಾಮಗಾರಿಗಳೂ ಸೇರಿದಂತೆ, ಸದರಿ ನವೀಕರಣ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳೊಂದಿಗೆ ಒಟ್ಟು ರೂ.89.00ಕೋಟಿಗಳ ಮೊತ್ತಕ್ಕೆ ವಿವರವಾದ ಅಂದಾಜು ಪಟ್ಟಿಗಳನ್ನು 2021-22ನೇ ಸಾಲಿನ ಲೋಕೋಪಯೋಗಿ ಇಲಾಖೆ, ಸಿವಿಲ್ ದರಪಟ್ಟಿ ಮತ್ತು 2022-23ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ದರಪಟ್ಟಿಯಲ್ಲಿ ಇಲ್ಲದ ಐಟಂಗಳಿಗೆ ಮಾರುಕಟ್ಟೆ ದರಗಳನ್ನು ಅಳವಡಿಸಿಕೊಂಡು ತಯಾರಿಸಿ, ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಸಲ್ಲಿಸಿರುತ್ತಾರೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಂದಾಜು ಪಟ್ಟಿಗಳಲ್ಲಿ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಛಾವಣಿ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್ ಅಳವಡಿಸುವುದು, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು

ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

ಮುಂದುವರೆದು, ಸದರಿ ಕಟ್ಟಡಗಳು ತುಂಬಾ ಹಳೆಯ ಕಟ್ಟಡಗಳಾಗಿದ್ದು, ಈ ಹಿಂದೆ ಅಗ್ನಿ ನಂದಕ ಅಂಶಗಳು(Fire Fighting) ಒಳಗೊಂಡಿಲ್ಲದ ಕಾರಣ ಮತ್ತು Fire norms ಪ್ರಕಾರ ಇವುಗಳನ್ನು ಅಳವಡಿಸುವುದು ಅವಶ್ಯಕವಾಗಿರುವುದರಿಂದ ಸದರಿ ಕಟ್ಟಡಗಳಿಗೆ ಅಗ್ನಿ ನಂದಕ(Fire Fighting) ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜಿನಲ್ಲಿ ಅನುವು ಮಾಡಿಕೊಂಡು ಈ ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಯೊಂದಿಗೆ ಯೋಜನಾ ವರದಿಯನ್ನು ಸಲ್ಲಿಸಿರುತ್ತಾರೆ.

| ಕ್ರ. ಸಂ | ಕಾಮಗಾರಿಗಳ ಹೆಸರು | ಕಟ್ಟಡ ನಿರ್ಮಾಣ ಗೊಂಡ ವರ್ಷ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಕಾಮಗಾರಿಗಳ ವಿವರಣೆ |
|---|---|---|---|---|
| 1. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಒಪಿಡಿ/ ಐಪಿಡಿ ಕಟ್ಟಡದ ನವೀಕರಣ ಕಾಮಗಾರಿ | 1977 | 490.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 5 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 5 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸಿಮೆಂಟ್ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಹಾಳಾಗಿರುವ ಫಾಲ್ಸ್ ಸೀಲಿಂಗ್ ತೆಗೆದು ಹೊಸದಾಗಿ ಅಳವಡಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 2. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ರೇಡಿಯಾಲಜಿ / ಪೆಥಾಲಜಿ ಕಟ್ಟಡದ ನವೀಕರಣ ಕಾಮಗಾರಿ | 1965 | 650.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್ ಗಳು ದುರಸ್ತಿಯಲ್ಲಿದ್ದು, ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ಭಾಗಶಃ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 3. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಎಸ್.ಎಸ್.ಬಿ.ಕಟ್ಟಡದ ನವೀಕರಣ ಕಾಮಗಾರಿ (Surgical Blocks) | 1959 | 1550.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 4 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 4 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು ಹಾಗೂ ಕಟ್ಟಡದ ಹೊರಭಾಗದಲ್ಲಿ ಕಲ್ಲಿನ ಗೋಡೆಯಿಂದ ನಿರ್ಮಿತವಾಗಿದ್ದು, ಇವುಗಳಿಗೆ ಸಿಮೆಂಟ್ ಗಾರೆಯಿಂದ ಪಾಯಿಂಟ್ ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ಭಾಗಶಃ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |

| | | | | |
|---|---|---|---|---|
| 4. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಆಡಳಿತ ಕಟ್ಟಡದ ನವೀಕರಣ ಕಾಮಗಾರಿ | 1927 | 520.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು, ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 5. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಒಪಿಡಿ ವಿಭಾಗದ ಕಟ್ಟಡದ ನವೀಕರಣ ಕಾಮಗಾರಿ | 1930 | 750.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು, ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 6. | ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಕಣ್ಣಾಸ್ಪತ್ರೆ ಕಟ್ಟಡದ ನವೀಕರಣ ಕಾಮಗಾರಿ | 1934 | 290.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು, ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 7. | ಮೈಸೂರು ನಗರದ ಚೆಲುವಾಂಬ ಆಸ್ಪತ್ರೆ ಕಟ್ಟಡದ ದುರಸ್ತಿ ಮತ್ತು ನವೀಕರಣ ಕಾಮಗಾರಿ | 1935 | 800.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು, ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 8. | ಮೈಸೂರು ನಗರದ ಚೆಲುವಾಂಬ ಆಸ್ಪತ್ರೆ ಮಹಿಳಾ | 2005 | 220.00 | ಈ ಕಟ್ಟಡವು ನೆಲ ಅಂತಸ್ತನ್ನು ಮಾತ್ರ ಒಳಗೊಂಡಿದ್ದು, ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ |

| | | | | |
|---|---|---|---|---|
| | ಓ.ಪಿ.ಡಿ ವಿಭಾಗದ ದುರಸ್ಥಿ ಮತ್ತು ನವೀಕರಣ ಕಾಮಗಾರಿ | | | ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಚಾವಣಿ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ಥಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 9. | ಮೈಸೂರು ನಗರದ ಚೆಲುವಾಂಬ ಆಸ್ಪತ್ರೆ ಮಹಿಳಾ ಮತ್ತು ಮಕ್ಕಳ ವಿಭಾಗ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ | 1962 | 770.00 | ಈ ಕಟ್ಟಡವು ತಳಅಂತಸ್ತು ಸೇರಿದಂತೆ 4 ಅಂತಸ್ತುಗಳಿದ್ದು, ದುರಸ್ಥಿ ಮತ್ತು ನವೀಕರಣಕ್ಕೆ 4 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಚಾವಣಿ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ಥಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 10. | ಮೈಸೂರು ನಗರದ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿರುವ ಸೀತಾರಂಗ ಆಸ್ಪತ್ರೆಯ ದುರಸ್ಥಿ ಮತ್ತು ನವೀಕರಣ ಕಾಮಗಾರಿ | 1939 | 180.00 | ಈ ಕಟ್ಟಡವು ನೆಲಅಂತಸ್ತನ್ನು ಮಾತ್ರ ಒಳಗೊಂಡಿದ್ದು, ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸಿಮೆಂಟ್ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಕಟ್ಟಡದ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಚಾವಣಿ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ಥಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 11. | ಮೈಸೂರು ನಗರದ ಕೆ.ಆರ್. ಎಸ್ ರಸ್ತೆಯಲ್ಲಿರುವ ಪಿ.ಕೆ.ಟಿ.ಬಿ ಸ್ಯಾನಿಟೋರಿಯಂ ನ ಮುಖ್ಯ ಆಸ್ಪತ್ರೆ ಕಟ್ಟಡದ ನವೀಕರಣ ಮತ್ತು ದುರಸ್ಥಿ ಕಾಮಗಾರಿ | 1921 | 460.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ಥಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್‌ಗಳು ದುರಸ್ಥಿಯಲ್ಲಿದ್ದು ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಚಾವಣಿ ಭಾಗಶಃ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ಥಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 12. | ಮೈಸೂರು ವೈದ್ಯಕೀಯ ಕಾಲೇಜು ಸಂಶೋಧನಾ ಸಂಸ್ಥೆಗೆ ಸೇರಿದ ಆಡಳಿತ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ | 1969 | 680.00 | ಈ ಕಟ್ಟಡವು ನೆಲಮಹಡಿ ಸೇರಿದಂತೆ 2 ಅಂತಸ್ತುಗಳಿದ್ದು, ದುರಸ್ಥಿ ಮತ್ತು ನವೀಕರಣಕ್ಕೆ 2 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸುಣ್ಣದ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ಥಿ, ಪುರಾತನ ಕಟ್ಟಡ ಶೈಲಿಯಲ್ಲಿರುವ ಕಾರ್ನಿಸ್ ಗಳು ದುರಸ್ಥಿಯಲ್ಲಿದ್ದು ಇವುಗಳನ್ನು ಪುನರ್ ನಿರ್ಮಿಸುವುದು, ಬಾಗಿಲು ಮತ್ತು ಕಿಟಕಿಗಳ ದುರಸ್ಥಿ, ಮೇಲ್ಚಾವಣಿ ಭಾಗಶಃ ದುರಸ್ಥಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ |

| | | | | |
|---|---|---|---|---|
| | | | | ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 13. | ಮೈಸೂರು ವೈದ್ಯಕೀಯ ಕಾಲೇಜು ಸಂಶೋಧನಾ ಸಂಸ್ಥೆಗೆ ಸೇರಿದ ಯು.ಜಿ ಬಾಲಕರ ವಸತಿ ನಿಲಯ ಕಟ್ಟಡದ ದುರಸ್ತಿ ಮತ್ತು ನವೀಕರಣ ಕಾಮಗಾರಿ | 1962 | 620.00 | ಈ ಕಟ್ಟಡವು ತಳಅಂತಸ್ತು ಸೇರಿದಂತೆ 4 ಅಂತಸ್ತುಗಳಿದ್ದು, ದುರಸ್ತಿ ಮತ್ತು ನವೀಕರಣಕ್ಕೆ 4 ಅಂತಸ್ತುಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಟ್ಟಡದ ಒಳಭಾಗ ಹಾಗೂ ಹೊರಭಾಗಕ್ಕೆ ಭಾಗಶಃ ಸಿಮೆಂಟ್ ಗಾರೆಯಿಂದ ಗಿಲಾವು ಮಾಡುವುದು, ನೆಲಹಾಸು ಮತ್ತು ಗೋಡೆಯ ಆಯ್ದ ಭಾಗಗಳಲ್ಲಿ ಟೈಲ್ಸ್ ಅಳವಡಿಸುವುದು, ಹಾಳಾಗಿರುವ ಸಜ್ಜಾಗಳ ದುರಸ್ತಿ, ಬಾಗಿಲು ಮತ್ತು ಕಿಟಕಿಗಳ ದುರಸ್ತಿ, ಮೇಲ್ಛಾವಣಿ ದುರಸ್ತಿ, ಕಟ್ಟಡದ ಸುತ್ತಾ ಫ್ಲಾಗಿಂಗ್, ನೂತನ ತಂತ್ರಜ್ಞಾನದ ಪ್ರಕಾರ ಕಟ್ಟಡದಲ್ಲಿರುವ ಪಿಲ್ಲರ್ ಮತ್ತು ಬೀಮ್‌ಗಳನ್ನು ಬಲಪಡಿಸುವುದು, ಶೌಚಾಲಯಗಳ ದುರಸ್ತಿ, ನೀರು ಸರಬರಾಜು ಮತ್ತು ನೈರ್ಮಲೀಕರಣದ ಕೆಲಸ, ಕಟ್ಟಡದ ಒಳಭಾಗ ಮತ್ತು ಹೊರಭಾಗಕ್ಕೆ ಬಣ್ಣ ಲೇಪಿಸುವ ಕೆಲಸ, ಆಂತರಿಕ ವಿದ್ಯುಚ್ಛಕ್ತಿ ಇತ್ಯಾದಿ ಐಟಂಗಳನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| 14. | ಬೆಂಕಿ ಅವಘಡದಿಂದ ಪಾರಾಗುವ (Fire Fighting Works) ಕಾಮಗಾರಿ ಮತ್ತು ಆಸ್ಪತ್ರೆಗಳಿಗೆ ಬಾಹ್ಯ ವಿದ್ಯುದ್ದೀಕರಣ, ಸಿಸಿ ಕ್ಯಾಮರಾಗಳ ವ್ಯವಸ್ಥೆ ಮತ್ತು ಲ್ಯಾನ್ ನೆಟ್‌ವರ್ಕಿಂಗ್ ಕಾಮಗಾರಿ | - | 920.00 | ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ: ಸನಿ(ವೈ) KPME/94/2021-22, ದಿ: 07.05.2022 ರಲ್ಲಿ ತಿಳಿಸಿರುವಂತೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಟಿಪ್ಪಣಿ ಪತ್ರ ಸಂಖ್ಯೆ: ಆಕುಕ & ವೈಶಿಸ/2441/2022 ದಿ:30.04.2022ರಲ್ಲಿ ಸೂಚಿಸಿರುವಂತೆ ಆಸ್ಪತ್ರೆಗಳ ಮತ್ತು ವೈದ್ಯಕೀಯ ಕಾಲೇಜುಗಳ Fire Safety Audit ತುರ್ತಾಗಿ ಕೈಗೊಳ್ಳುವಂತೆ ಸೂಚಿಸಿರುವ ಹಿನ್ನಲೆಯಲ್ಲಿ ಈ ಆಸ್ಪತ್ರೆ ಕಟ್ಟಡಗಳಿಗೆ Fire Safety works ಕಾಮಗಾರಿಯನ್ನು ಹಾಗೂ ಬಾಹ್ಯ ವಿದ್ಯುದ್ದೀಕರಣ, ಸಿಸಿ ಕ್ಯಾಮರಾಗಳ ವ್ಯವಸ್ಥೆ ಮತ್ತು ಲ್ಯಾನ್ ನೆಟ್‌ವರ್ಕಿಂಗ್ ವ್ಯವಸ್ಥೆಯನ್ನು ಅಂದಾಜಿನಲ್ಲಿ ಅನುವು ಮಾಡಿಕೊಳ್ಳಲಾಗಿದೆ. |
| | **ಒಟ್ಟು ಮೊತ್ತ** | | **8900.00** | |

ಮೇಲಿನ ಎಲ್ಲಾ ಅಂಶಗಳನ್ವಯ 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು 2024ರಲ್ಲಿ ಶತಮಾನೋತ್ಸವನ್ನು ಆಚರಿಸುವುದಕ್ಕೆ ಅನುವಾಗುವಂತೆ ಸದರಿ ಸಂಸ್ಥೆಗೆ ಸೇರಿದ ಆಸ್ಪತ್ರೆಗಳಲ್ಲಿ ಕೈಗೊಳ್ಳಬೇಕಾದ ರೂ.89.00 ಕೋಟಿಗಳ ಮೊತ್ತದ 14 ನವೀಕರಣ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿಯಲ್ಲಿನ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ ಆಸ್ಪತ್ರೆಯ ಕಟ್ಟಡಗಳ ನವೀಕರಣವನ್ನು ರೂ.89.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು 2023ನೇ ಸಾಲಿನ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 187 ಎಂಎಸ್‌ಎಫ್ 2022, ದಿನಾಂಕ:07-10-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿಯಲ್ಲಿನ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ ಆಸ್ಪತ್ರೆಯ ಕಟ್ಟಡಗಳಿಗೆ ಸಂಬಂಧಿಸಿದಂತೆ, ಪ್ರಸ್ತಾವನೆಯಲ್ಲಿ ನಮೂದಿಸಲಾಗಿರುವ 14 ನವೀಕರಣ ಕಾಮಗಾರಿಗಳನ್ನು ರೂ.89.00 ಕೋಟಿಗಳ ಮೊತ್ತದಲ್ಲಿ ಕೈಗೊಂಡು, 2023ರ ಅಂತ್ಯಕ್ಕೆ ಪೂರ್ಣಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಈ ಕಾಮಗಾರಿಗಳ ವೆಚ್ಚವನ್ನು ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ: 4210-03-105-1-09 ರಡಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ, 1999 ಮತ್ತು ಅದರ ಅಡಿಯಲ್ಲಿ ರಚಿತವಾಗಿರುವ ನಿಯಮಗಳ ಅಡಿಯಲ್ಲಿ ಹಾಗೂ ಬಂಧಿತವಾಗಿ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗ ಸೂಚಿಗಳು, ಸುತ್ತೋಲೆ ಹಾಗೂ ಆದೇಶಗಳನ್ವಯ ನಿರ್ವಹಿಸತಕ್ಕದ್ದು.

ಈ ಸಂಬಂಧ ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ ಹಾಗೂ ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ದಿನಾಂಕ:14.09.2022ರ ಸಚಿವ ಸಂಪುಟದ ಅನುಮೋದನೆಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 299 ವೆಚ್ಚ-5/2022 ದಿನಾಂಕ:01.08.2022ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಪತ್ರ ಸ್ವೀಕರಿಸಿದ ದಿನಾಂಕ 10/10/22

(ಜಿ. ಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ವೈದ್ಯಕೀಯ ಶಿಕ್ಷಣ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ 1 & 2), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮೈಸೂರು
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಖಜಾನಾ ಉಪ ನಿರ್ದೇಶಕರು, ಟಿಎನ್ಎಂಸಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ. ಬೆಂಗಳೂರು.
9. ಯೋಜನಾಧಿಕಾರಿಗಳು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು